ಕರ್ನಾಟಕ ಸರ್ಕಾರ
Government of Karnataka

# ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ರಾಯಚೂರು.

# Raichur Institute of Medical Sciences, Raichur

(ಸರ್ಕಾರದ ಸ್ವಾಯತ್ತ ಸಂಸ್ಥೆ) (Govt. Autonomous Institution)

ಹೈದ್ರಾಬಾದ್ ರೋಡ್, ರಾಯಚೂರು –584102 Hydrabad Road, Raichur -584102

Phone /Fax-08532-238488/89 Web. www. rims-raichur.com / info@rims-raichur.com

## 18ನೇ ಆಡಳಿತ ಮಂಡಳಿ ಸಭೆಯ ಸಭಾ ನಡವಳಿಗಳು

ಸನ್ಮಾನ್ಯ ಡಾ॥ ಶರಣ ಪ್ರಕಾಶ ಆರ್. ಪಾಟೀಲ್, ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು, ಕರ್ನಾಟಕ ಸರ್ಕಾರ ಇವರ ಅಧ್ಯಕ್ಷತೆಯಲ್ಲಿ ದಿನಾಂಕ 31.07.2013 ರಂದು ಕೊಠಡಿ ಸಂಖ್ಯೆ. 231, ಎರಡನೇ ಮಹಡಿ, ವಿಧಾನ ಸೌಧ, ಬೆಂಗಳೂರಿನಲ್ಲಿ ಜರುಗಿದ ರಿಮ್ಸ್, ರಾಯಚೂರಿನ 18ನೇ ವಿಶೇಷ ಆಡಳಿತ ಮಂಡಳಿ ಸಭೆಯ ಸಭಾ ನಡುವಳಿಗಳು.

### ಸಭೆಯಲ್ಲಿ ಹಾಜರಿದ್ದ ಸದಸ್ಯರು

1. ಶ್ರೀ ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ – ಅಧ್ಯಕ್ಷರು
   ವೈದ್ಯಕೀಯ ಶಿಕ್ಷಣ ಸಚಿವರು,
   ಕರ್ನಾಟಕ ಸರ್ಕಾರ, ಬೆಂಗಳೂರು. ಹಾಗೂ
   ಅಧ್ಯಕ್ಷರು, ರಾ.ವೈ.ವಿ.ಸಂಸ್ಥೆ, ಆಡಳಿತ ಮಂಡಳಿಯ ಗೌರವಾನ್ವಿತ ಅಧ್ಯಕ್ಷರು

2. ಶ್ರೀ ಕೆ.ಹೆಚ್. ಗೋವಿಂದರಾಜ್ – ಉಪಾಧ್ಯಕ್ಷರು
   ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
   ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ (ವೈ.ಶಿ),
   ಬೆಂಗಳೂರು. ಹಾಗೂ
   ಉಪಾಧ್ಯಕ್ಷರು, ರಾ.ವೈ.ವಿ.ಸಂಸ್ಥೆ, ಆಡಳಿತ ಮಂಡಳಿಯ ಗೌರವಾನ್ವಿತ ಅಧ್ಯಕ್ಷರು

3. ಎಸ್.ವಿ ಅಳವಂಡಿ, – ಸದಸ್ಯರು
   ಅಧೀನ ಕಾರ್ಯದರ್ಶಿಗಳು,
   ಆರ್ಥಿಕ ಇಲಾಖೆ, ವಿಧಾನ ಸೌ, ಬೆಂಗಳೂರು
   ಬೆಂಗಳೂರು.

4. ಡಾ.ಜಿ.ವಿ ವೆಂಕಟೇಶ್, – ಸದಸ್ಯರು
   ನಿರ್ದೇಶಕರು,
   ವೈದ್ಯಕೀಯ ಶಿಕ್ಷಣ, ಬೆಂಗಳೂರು
   ಆರ್ಥಿಕ ಇಲಾಖೆ, ವಿಧಾನ ಸೌಧ, ಬೆಂಗಳೂರು

5. ಶ್ರೀಮತಿ ವಿದ್ಯಾಕುಮಾರಿ. ಕೆ, – ವಿಶೇಷ ಆಹ್ವಾನಿತರು
   ಸರ್ಕಾರದ ಉಪ ಕಾರ್ಯದರ್ಶಿಗಳು,
   ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ (ವೈ.ಶಿ),
   ಬೆಂಗಳೂರು.

6. ಡಾ. ಶ್ರೀನಿವಾಸ್‌ಮೂರ್ತಿ, – ವಿಶೇಷ ಆಹ್ವಾನಿತರು
ವೈದ್ಯಕೀಯ ಅಧೀಕ್ಷಕರು, ರಿಮ್ಸ್ ಭೋಧಕ ಆಸ್ಪತ್ರೆ, ರಾಯಚೂರು.

7. ಶ್ರೀ ನಾಗೇಶ್, – ವಿಶೇಷ ಆಹ್ವಾನಿತರು
ಮುಖ್ಯ ಆಡಳಿತಾಧಿಕಾರಿಗಳು, ರಿಮ್ಸ್, ರಾಯಚೂರು

8. ಶ್ರೀ ಸೈಯದ್ ಜೀಯಾವುದ್ದೀನ್, – ವಿಶೇಷ ಆಹ್ವಾನಿತರು
ಆರ್ಥಿಕ ಸಲಹೆಗಾರರು, ರಿಮ್ಸ್, ರಾಯಚೂರು

9. ಡಾ. ಶಂಕರ್ ಮಲಪುರೆ, ವಿಶೇಷಾಧಿಕಾರಿಗಳು, – ವಿಶೇಷ ಆಹ್ವಾನಿತರು
ರಾಜೀವ್ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ, ರಾಯಚೂರು

10. ಡಾ. ಬಸವರಾಜ್ ಪೀರಾಪುರ್ – ಸದಸ್ಯ ಕಾರ್ಯದರ್ಶಿ
ನಿರ್ದೇಶಕರು, ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ರಾಯಚೂರು.

ಡಾ. ಬಸವರಾಜ್ ಪೀರಾಪುರ್, ನಿರ್ದೇಶಕರು, ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ರಾಯಚೂರು ಉಪಸ್ಥಿತರಿದ್ದ ಗೌರವಾನ್ವಿತ ಅಧ್ಯಕ್ಷರನ್ನು ಹಾಗೂ ಸದಸ್ಯರುಗಳನ್ನು ಸ್ವಾಗತಿಸುತ್ತಾ ಸನ್ಮಾನ್ಯ ಸಚಿವರು, ವೈದ್ಯಕೀಯ ಶಿಕ್ಷಣ ಹಾಗೂ ಅಧ್ಯಕ್ಷರು, ಆಡಳಿತ ಮಂಡಳಿ ಇವರನ್ನು ಸಭೆಯ ಅಧ್ಯಕ್ಷತೆಯನ್ನು ವಹಿಸಿ ಸಭೆಯ ಕಾರ್ಯಕಲಾಪಗಳನ್ನು ನಡೆಸಿಕೊಡಲು ಕೋರಿದರು.

**ಆಡಳಿತ ಮಂಡಳಿ ಸಭೆಯ ಅಧ್ಯಕ್ಷರ ಸಮಕ್ಷಮದಲ್ಲಿ ತೆಗೆದುಕೊಂಡ ನಿರ್ಣಯಗಳು ಈ ಕೆಳಗಿನಂತಿವೆ.**

**ವಿಷಯ ಸೂಚಿ ಸಂಖ್ಯೆ : 01 ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ ಸಿ & ಆರ್ ನಿಯಮಗಳನ್ನು (Cadre & Recruitment Rules) ಅನುಷ್ಠಾನಗೊಳಿಸುವ ಬಗ್ಗೆ.**

ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯು 2007–08ನೇ ಸಾಲಿನಿಂದ ಪ್ರಾರಂಭವಾಗಿದ್ದು, ವೈದ್ಯಕೀಯ ಶಿಕ್ಷಣ ಇಲಾಖೆಯು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಿಂದ ಪ್ರತ್ಯೇಕಗೊಂಡು ಹೊಸ ಇಲಾಖೆಯಾಗಿ ಪರಿವರ್ತನೆಗೊಂಡಿದ್ದರಿಂದ ವೈದ್ಯಕೀಯ ಶಿಕ್ಷಣ ಇಲಾಖೆಯ ಸ್ವಾಯತ್ತ ಸಂಸ್ಥೆಯಾಗಿ ಕಾರ್ಯನಿರ್ವಹಿಸುತ್ತಿದೆ. ಇಲ್ಲಿಯವರೆಗೆ ವೃಂದ ಮತ್ತು ನೇಮಕಾತಿ ನಿಯಮಗಳನ್ನು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ನಿಯಮಗಳನ್ನೇ ಅನುಸರಿಸಲಾಗುತ್ತಿತ್ತು. ಆದರೆ ಪ್ರಸ್ತುತ ವೈದ್ಯಕೀಯ ಶಿಕ್ಷಣ ಇಲಾಖೆಗೆ ಸಂಬಂಧಪಟ್ಟ ವೃಂದ ಮತ್ತು ನೇಮಕಾತಿ ನಿಯಮಗಳನ್ನು ಪ್ರತ್ಯೇಕವಾಗಿ ಸಿದ್ದಪಡಿಸಲಾಗಿದೆ. ಹಾಗೂ ವೃಂದ ಮತ್ತು ನೇಮಕಾತಿಗೆ ಸಂಬಂಧಪಟ್ಟಂತೆ ಆಕ್ಷೇಪಣೆಗಳನ್ನು ಸ್ವೀಕರಿಸಲು ದಿನಾಂಕ 31.07.2013ರವರೆಗೆ ಅವಧಿ ನಿಗದಿ ಪಡಿಸಲಾಗಿದೆ. ಈವರೆಗೆ ಇದಕ್ಕೆ ಸಂಬಂಧ ಪಟ್ಟ ಯಾವುದೇ ಆಕ್ಷೇಪಣೆಯು ಈ ಕಾರ್ಯಾಲಯದಲ್ಲಿ ಸ್ವೀಕೃತವಾಗಿರುವುದಿಲ್ಲ.

(ಡಾ.ಶಂಕರ್ ಮಲಪುರೆ)
ವಿಶೇಷಾಧಿಕಾರಿಗಳು,
ರಾಜೀವ್ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ,
ರಾಯಚೂರು

ಡಾ.ಬಸವರಾಜ್ ಪೀರಾಪುರ್
ನಿರ್ದೇಶಕರು,
ರಿಮ್ಸ್, ರಾಯಚೂರು
ಹಾಗೂ ಸದಸ್ಯ ಕಾರ್ಯದರ್ಶಿಗಳು,
ರಿಮ್ಸ್ ಆಡಳಿತ ಮಂಡಳಿ ಸಭೆ,
ರಾಯಚೂರು

ಕೆ.ಹೆಚ್. ಗೋವಿಂದರಾಜ್. ಭಾ.ಆ.ಸೇ
ಸರ್ಕಾರದ ಕಾರ್ಯದರ್ಶಿಗಳು,
ಆಕುಕ, ವೈದ್ಯಕೀಯ ಶಿಕ್ಷಣ,
ಹಾಗೂ ಉಪಾಧ್ಯಕ್ಷರು, ರಿಮ್ಸ್ ಆಡಳಿತ
ಮಂಡಳಿ ಸಭೆ, ರಾಯಚೂರು

ಡಾ. ಶರಣ ಪ್ರಕಾಶ್ ರುದ್ರಪ್ಪ ಪಾಟೀಲ,
ವೈದ್ಯಕೀಯ ಶಿಕ್ಷಣ ಸಚಿವರು, ಹಾಗೂ
ಅಧ್ಯಕ್ಷರು, ಆಡಳಿತ ಮಂಡಳಿ ಸಭೆ,
ರಿಮ್ಸ್, ರಾಯಚೂರು

ಕಾರಣ ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಗೆ ಸಂಬಂಧಪಟ್ಟ ವೃಂದ ಮತ್ತು ನೇಮಕಾತಿ ನಿಯಮಗಳನ್ನು **(Cadre & Recruitment Rules)** ಜಾರಿಗೊಳಿಸಲು ಆಡಳಿತ ಮಂಡಳಿಯ ಅನುಮೋದನೆ ಕೋರಿ ಸಲ್ಲಿಸಿದೆ.

**ಸಭೆಯ ತೀರ್ಮಾನ :**

ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಗೆ ಸಂಬಂಧಪಟ್ಟ ವೃಂದ ಮತ್ತು ನೇಮಕಾತಿ ನಿಯಮಗಳನ್ನು ನಿರ್ದೇಶಕರು, ವೈದ್ಯಕೀಯ ಶಿಕ್ಷಣ, ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ ಇವರಿಂದ ಆಡಳಿತ ಮಂಡಳಿ ಸಭೆಯಲ್ಲಿ ಚರ್ಚಿಸಿದಂತೆ, ತಿದ್ದುಪಡಿ ಮಾಡಲಾದ ವೃಂದ ಮತ್ತು ನೇಮಕಾತಿ ನಿಯಮಗಳನ್ನು ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇವರಿಂದ ಅಂತರ್‌ಜಾಲದ ಮೂಲಕ ಪಡೆದುಕೊಂಡು **(Cadre & Recruitment Rules)** ತಕ್ಷಣದಿಂದಲೇ ಅನುಷ್ಠಾನಗೊಳಿಸುವಂತೆ ಆಡಳಿತ ಮಂಡಳಿಯು ಸರ್ವಾನುಮತದಿಂದ ಅನುಮೋದನೆ ನೀಡಲಾಯಿತು.

| | |
|---|---|
| **ವಿಷಯ ಸೂಚಿ ಸಂಖ್ಯೆ : 02** | **ಅಧ್ಯಕ್ಷರ ಅಪ್ಪಣೆ ಮೇರೆಗೆ ಇನ್ನಿತರ ವಿಷಯಗಳು** |

**ವಿಷಯ ಸೂಚಿ ಸಂಖ್ಯೆ. 1**

**ಸರ್ಕಾರದ ನಿಯಮಾವಳಿಯಂತೆ ನಿವೃತ್ತಿ ಹೊಂದಿ ಕಾರ್ಯನಿರ್ವಹಿಸುತ್ತಿರುವ ಬೋಧಕ ಸಿಬ್ಬಂದಿಗೆ ವೇತನ ನಿಗದಿ ಪಡಿಸುವ ಬಗ್ಗೆ.**

**ಸಭೆಯ ತೀರ್ಮಾನ :-**

ಸರ್ಕಾರದ ನಿಯಮಾವಳಿಯಂತೆ, ನಿವೃತ್ತಿ ಹೊಂದಿ ರಿಮ್ಸ್ ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಬೋಧಕ ಸಿಬ್ಬಂದಿಗಳಿಗೆ ನಿವೃತ್ತಿ ಹೊಂಧಿದ ನಂತರ ಮರು ನೇಮಕಾತಿ ಸಮಯದಲ್ಲಿ ನಿಗದಿ ಪಡಿಸಲಾದ ವೇತನವನ್ನು ಸಂಚಿತ ವೇತನವೆಂದು ಪರಿಗಣಿಸಿ ಮುಂದುವರೆಸಿಕೊಂಡು ಹೋಗುವಂತೆ ನಿರ್ದೇಶಕರು, ರಿಮ್ಸ್, ರಾಯಚೂರು ಇವರಿಗೆ ಆಡಳಿತ ಮಂಡಳಿಯು ಸೂಚಿಸಿತು.

ರಿಮ್ಸ್ ಸಂಸ್ಥೆಯಲ್ಲಿ ವೈದ್ಯಶಾಸ್ತ್ರ ಮತ್ತು ರೇಡಿಯಾಲಜಿ ವಿಭಾಗದಲ್ಲಿ ಖಾಲಿ ಇರುವ ಪ್ರಾಧ್ಯಾಪಕರು ಹಾಗೂ ಸಹ ಪ್ರಾಧ್ಯಾಫಕರ ಹುದ್ದೆಗಳನ್ನು ಭರ್ತಿ ಮಾಡಲು ನೇರ ಸಂದರ್ಶನ ಜರುಗಿಸಿದರೂ ಸಹ ಸೂಕ್ತ ಅಭ್ಯರ್ಥಿಗಳು ಸಂದರ್ಶನಕ್ಕೆ ಹಾಜರಾಗದೇ ಇರುವುದರಿಂದ ವೈದ್ಯಶಾಸ್ತ್ರ ವಿಭಾಗದಲ್ಲಿ ಪ್ರಾಧ್ಯಾಪಕರಾಗಿ ಕಾರ್ಯನಿರ್ವಹಿಸುತ್ತಿರುವ ಡಾ. ಎ.ಬಿ. ಪಾಟೀಲ್ ಹಾಗೂ ರೇಡಿಯಾಲಜಿ ವಿಭಾಗದಲ್ಲಿ ಸಹ ಪ್ರಾಧ್ಯಾಪಕರಾಗಿ ಕಾರ್ಯನಿರ್ವಹಿಸುತ್ತಿರುವ ಡಾ. ಜಿ.ಜಿ. ನಂದೂರ್‌ಕರ್ ಇವರ ಸೇವೆಯು ಸಂಸ್ಥೆಗೆ ಅತಿ ಅವಶ್ಯಕವಾಗಿರುವುದರಿಂದ, ಸದರಿ ಸಿಬ್ಬಂದಿಗಳನ್ನು ಹೊರತುಪಡಿಸಿ, ಇನ್ನುಳಿದಂತೆ ನಿವೃತ್ತಿ ಹೊಂದಿ ಕಾರ್ಯನಿರ್ವಹಿಸುತ್ತಿರುವ ಬೋಧಕ ಸಿಬ್ಬಂದಿಗಳನ್ನು ಸೇವೆಯಿಂದ ಬಿಡುಗಡೆಗೊಳಿಸಲು ಆಡಳಿತ ಮಂಡಳಿ ಸಭೆಯು ಅನುಮೋದನೆ ನೀಡಿತು.

(ಡಾ.ಶಂಕರ್ ಮಲಪುರೆ)
ವಿಶೇಷಾಧಿಕಾರಿಗಳು,
ರಾಜೀವ್ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ,
ರಾಯಚೂರು

ಡಾ.ಬಸವರಾಜ್ ಪೀರಾಪುರ್
ನಿರ್ದೇಶಕರು,
ರಿಮ್ಸ್, ರಾಯಚೂರು
ಹಾಗೂ ಸದಸ್ಯ ಕಾರ್ಯದರ್ಶಿಗಳು,
ರಿಮ್ಸ್ ಆಡಳಿತ ಮಂಡಳಿ ಸಭೆ,
ರಾಯಚೂರು

ಕೆ.ಹೆಚ್. ಗೋವಿಂದರಾಜ್. ಭಾ.ಆ.ಸೇ
ಸರ್ಕಾರದ ಕಾರ್ಯದರ್ಶಿಗಳು,
ಆಕುಕ, ವೈದ್ಯಕೀಯ ಶಿಕ್ಷಣ,
ಹಾಗೂ ಉಪಾಧ್ಯಕ್ಷರು, ರಿಮ್ಸ್ ಆಡಳಿತ
ಮಂಡಳಿ ಸಭೆ, ರಾಯಚೂರು

ಡಾ. ಶರಣ ಪ್ರಕಾಶ್ ರುದ್ರಪ್ಪ ಪಾಟೀಲ,
ವೈದ್ಯಕೀಯ ಶಿಕ್ಷಣ ಸಚಿವರು, ಹಾಗೂ
ಅಧ್ಯಕ್ಷರು, ಆಡಳಿತ ಮಂಡಳಿ ಸಭೆ,
ರಿಮ್ಸ್, ರಾಯಚೂರು

**ವಿಷಯ ಸೂಚಿ ಸಂಖ್ಯೆ. 2**

**ನೂತನ ಬೋಧಕ ಆಸ್ಪತ್ರೆಗೆ ಅವಶ್ಯವಿರುವ ಉಪಕರಣ ಹಾಗೂ ಪೀಠೋಪಕರಣಗಳ ಟೆಂಡರ್‌ನ್ನು ಕರೆಯುವ ಬಗ್ಗೆ.**

**ಸಭೆಯ ತೀರ್ಮಾನ**

ನೂತನ 520 ಹಾಸಿಗೆಗಳ ಬೋದಕ ಆಸ್ಪತ್ರೆಗೆ ಅತಿ ಅವಶ್ಯವಿರುವ ರೂ. 18.00 ಕೋಟಿಗಳ ಉಪಕರಣ ಹಾಗೂ ಪೀಠೋಪಕರಣಗಳ ಟೆಂಡರ್‌ನ್ನು ಕರ್ನಾಟಕ ಪಾರದರ್ಶಕತೆ ಅಧಿನಿಯಮ 1999 ಮತ್ತು ನಿಯಮ 2000ರನ್ವಯ ವಿಭಾಗವಾರು ಕರೆಯಲು ಆಡಳಿತ ಮಂಡಳಿಯು ಅನುಮೋದನೆ ನೀಡಿತು. ಹಾಗೂ ಹಳೆಯ ಜಿಲ್ಲಾ ಬೋಧಕ ಆಸ್ಪತ್ರೆಯನ್ನು ರಿಮ್ಸ್ ಅವರಣದಲ್ಲಿರುವ ನೂತನ ಆಸ್ಪತ್ರೆಗೆ ಸ್ಥಳಾಂತರಿಸಲು ಅವಶ್ಯವಿರುವ ಎಲ್ಲಾ ಮುಂಜಾಗ್ರತ ಕ್ರಮಗಳನ್ನು ಕೈಗೊಳ್ಳುವಂತೆ ನಿರ್ದೇಶಕರು ರಿಮ್ಸ್, ರಾಯಚೂರು ಇವರಿಗೆ ಆಡಳಿತ ಮಂಡಳಿಯು ಸೂಚಿಸಿತು.

**ವಿಷಯ ಸೂಚಿ ಸಂಖ್ಯೆ. 3**

**ರಾಜೀವ್ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ಅಪೋಲೋ ಸಮೂಹದಿಂದ ನೇಮಕಾತಿ ಹೊಂದಿ ಗ್ರೂಪ್ 'ಸಿ' ಮತ್ತು ಗ್ರೂಪ್ 'ಡಿ' ನೌಕರರನ್ನು ನೇಮಕಾತಿ ಮಾಡಿಕೊಳ್ಳುವ ಬಗ್ಗೆ.**

**ಸಭೆಯ ತೀರ್ಮಾನ**

ರಾಜೀವ್ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ಈ ಹಿಂದೆ ಅಪೋಲೋ ಸಮೂಹದಿಂದ ನೇಮಕಾತಿ ಹೊಂದಿದ್ದ 100 ಗ್ರೂಪ್ 'ಸಿ' ನೌಕರರನ್ನು ಪ್ರತಿ ಮಾಹೆ ರೂ. 8000/-ಗಳ stipend ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳಲು ಆಡಳಿತ ಮಂಡಳಿಯು ಅನುಮತಿ ನೀಡಿತು. ಹಾಗೂ ಅಪೋಲೋ ಸಮೂಹದಿಂದ ನೇಮಕಾತಿ ಹೊಂದಿದ್ದ, 110 ಗ್ರೂಪ್ 'ಡಿ' ನೌಕರರನ್ನು ಹೊರಗುತ್ತಿಗೆ ಮೂಲಕ (ಏಜನ್ಸಿ) ಪಡೆದುಕೊಳ್ಳಲು ಸೂಚಿಸಿ, ಏಜನ್ಸಿಯವರಿಗೆ ಈ ಹಿಂದೆ ಕಾರ್ಯನಿರ್ವಹಿಸುತ್ತಿದ್ದ 110 ಗ್ರೂಪ್ 'ಡಿ' ನೌಕರರನ್ನೇ ನೇಮಕಾತಿ ಮಾಡಿಕೊಳ್ಳುವಂತೆ ಸೂಚಿಸಲು ವಿಶೇಷಾಧಿಕಾರಿಗಳು, ರಾಜೀವ್ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಇವರಿಗೆ ಆಡಳಿತ ಮಂಡಳಿಯು ಸೂಚಿಸಿತು.

(ಡಾ.ಶಂಕರ್ ಮಲಪೂರೆ)
ವಿಶೇಷಾಧಿಕಾರಿಗಳು,
ರಾಜೀವ್ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ,
ರಾಯಚೂರು

ಡಾ.ಬಸವರಾಜ್ ಪೀರಾಪುರ್
ನಿರ್ದೇಶಕರು,
ರಿಮ್ಸ್, ರಾಯಚೂರು
ಹಾಗೂ ಸದಸ್ಯ ಕಾರ್ಯದರ್ಶಿಗಳು,
ರಿಮ್ಸ್ ಆಡಳಿತ ಮಂಡಳಿ ಸಭೆ,
ರಾಯಚೂರು

ಕೆ.ಹೆಚ್. ಗೋವಿಂದರಾಜ್. ಭಾ.ಆ.ಸೇ
ಸರ್ಕಾರದ ಕಾರ್ಯದರ್ಶಿಗಳು,
ಆಕುಕ, ವೈದ್ಯಕೀಯ ಶಿಕ್ಷಣ,
ಹಾಗೂ ಉಪಾಧ್ಯಕ್ಷರು, ರಿಮ್ಸ್ ಆಡಳಿತ
ಮಂಡಳಿ ಸಭೆ, ರಾಯಚೂರು

ಡಾ. ಶರಣ ಪ್ರಕಾಶ್ ರುದ್ರಪ್ಪ ಪಾಟೀಲ,
ವೈದ್ಯಕೀಯ ಶಿಕ್ಷಣ ಸಚಿವರು, ಹಾಗೂ
ಅಧ್ಯಕ್ಷರು, ಆಡಳಿತ ಮಂಡಳಿ ಸಭೆ,
ರಿಮ್ಸ್, ರಾಯಚೂರು

**ವಿಷಯ ಸೂಚಿ ಸಂಖ್ಯೆ. 4**

**ಅಪೋಲೋ ಸಮೂಹದವರು ರಾಜೀವ್ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯನ್ನು ಹಸ್ತಾಂತರಿಸುವ ವೇಳೆಯಲ್ಲಿ ಉಪಕರಣಗಳನ್ನು ಕೊಠಡಿಯಲ್ಲಿಟ್ಟು ಬೀಗ ಹಾಕಲಾಗಿದ್ದು, ಅದನ್ನು ಪಂಚನಾಮ ಮಾಡುವ ಬಗ್ಗೆ.**

**ಸಭೆಯ ತೀರ್ಮಾನ**

ಅಪೋಲೋ ಸಮೂಹದವರು ರಾಜೀವ್ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯನ್ನು ಹಸ್ತಾಂತರಿಸುವ ವೇಳೆಯಲ್ಲಿ ಆಸ್ಪತ್ರೆಯಲ್ಲಿದ್ದ ಉಪಕರಣಗಳನ್ನು ಕೊಠಡಿಗಳಲ್ಲಿಟ್ಟು ಬೀಗ ಹಾಕಲಾಗಿರುವುದನ್ನು ವಿಶೇಷಾಧಿಕಾರಿಗಳು ಸಭೆಯ ಗಮನಕ್ಕೆ ತಂದರು. ಆಡಳಿತ ಮಂಡಳಿಯು ಕೊಠಡಿಗಳ ಬೀಗಗಳನ್ನು ಒಡೆದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಸಮ್ಮುಖದಲ್ಲಿ ಉಪಕರಣಗಳನ್ನು ಪರಿಶೀಲನೆ ಮಾಡುವಂತೆ ಹಾಗೂ ಪರಿಶೀಲನೆಯ ನಂತರ ಎಲ್ಲಾ ಉಪಕರಣಗಳ ಪಟ್ಟಿಯನ್ನು ಸರ್ಕಾರಕ್ಕೆ ಸಲ್ಲಿಸುವಂತೆ ಸೂಚಿಸಿತು. ಹಾಗೂ ಆಸ್ಪತ್ರೆಯ ಪುನಾರಂಭಕ್ಕೆ ಅವಶ್ಯಕವಾಗಿ ಬೇಕಾದ ಉಪಕರಣ ಹಾಗೂ ಪೀಠೋಪಕರಣಗಳ ಪಟ್ಟಿಯನ್ನು (ಉತ್ತಮ ಸ್ಥಿತಿಯಲ್ಲಿರುವ ಉಪಕರಣಗಳನ್ನು ಹೊರತು ಪಡಿಸಿ) ಸಿದ್ದಪಡಿಸಿ ಟೆಂಡರ್ ಕರೆಯಲು ಅನುಮತಿಗಾಗಿ ಸರ್ಕಾರಕ್ಕೆ ಸಲ್ಲಿಸುವಂತೆ ವಿಶೇಷಾಧಿಕಾರಿಗಳು, ರಾಜೀವ್ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ, ಇವರಿಗೆ ಸೂಚಿಸಲಾಯಿತು.

**ವಿಷಯ ಸೂಚಿ ಸಂಖ್ಯೆ. 5**

**ರಾಜೀವ್ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ಖಾಲಿ ಇರುವ ಬೋಧಕ ಸಿಬ್ಬಂದಿಗಳಿಗೆ ನೇಮಕಾತಿ ಮಾಡಿಕೊಳ್ಳಲು ಅನುಮತಿ ನೀಡುವ ಬಗ್ಗೆ.**

**ಸಭೆಯ ತೀರ್ಮಾನ**

ರಾಜೀವ್ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ದಿನಾಂಕ 17.07.2013ರಂದು ಬೋಧಕ ಸಿಬ್ಬಂದಿ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲು ನೇರ ಸಂದರ್ಶನ ಪ್ರಕ್ರಿಯೆ ನಡೆಸಲಾಗಿದ್ದು, ಅದರೂ ಸಹ ಹಲವು ಹುದ್ದೆಗಳು ಭರ್ತಿಯಾಗದೇ ಖಾಲಿ ಉಳಿದಿರುವ ಕಾರಣ, ಖಾಲಿ ಇರುವ ಬೋಧಕ ಸಿಬ್ಬಂದಿ ಹುದ್ದೆಗಳ ಜೊತೆಗೆ ಗ್ಯಾಸ್ಟ್ರೋಎಂಟ್ರಾಲಜಿ (ಪ್ರಾಧ್ಯಾಪಕರು – 1, ಸಹ ಪ್ರಾಧ್ಯಾಪಕರು – 1 ಹಾಗೂ ಸಹಾಯಕ ಪ್ರಾಧ್ಯಾಪಕರು – 1) ಮತ್ತು ರೇಡಿಯಾಲಜಿ (ಪ್ರಾಧ್ಯಾಪಕರು – 1, ಸಹ ಪ್ರಾಧ್ಯಾಪಕರು – 1 ಹಾಗೂ ಸಹಾಯಕ ಪ್ರಾಧ್ಯಾಪಕರು – 1) ವಿಭಾಗದ ಹುದ್ದೆಗಳನ್ನು ಪತ್ರಿಕಾ ಪ್ರಕಟಣೆ ಹೊರಡಿಸಿ, ನೇರ ಸಂದರ್ಶನದ ಮೂಲಕ ಕಲಂ 371 (ಜೆ)ರ ಮೀಸಲಾತಿ ನಿಯಮಗಳನ್ನು ಪಾಲಿಸಿ ಕೊಂಡು ನೇಮಕಾತಿ ಮಾಡಿಕೊಳ್ಳಲು ಆಡಳಿತ ಮಂಡಳಿಯು ಅನುಮತಿ ನೀಡಿತು.

ಸಭೆಯು ವಂದನೆಗಳೊಂದಿಗೆ ಮುಕ್ತಾಯವಾಯಿತು.

(ಡಾ.ಶಂಕರ್ ಮಲಪುರ)
ವಿಶೇಷಾಧಿಕಾರಿಗಳು,
ರಾಜೀವ್ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ,
ರಾಯಚೂರು

ಡಾ.ಬಸವರಾಜ್ ಪೀರಾಪುರ್
ನಿರ್ದೇಶಕರು,
ರಿಮ್ಸ್, ರಾಯಚೂರು
ಹಾಗೂ ಸದಸ್ಯ ಕಾರ್ಯದರ್ಶಿಗಳು,
ರಿಮ್ಸ್ ಆಡಳಿತ ಮಂಡಳಿ ಸಭೆ,
ರಾಯಚೂರು

ಕೆ.ಹೆಚ್. ಗೋವಿಂದರಾಜ್. ಭಾ.ಆ.ಸೇ
ಸರ್ಕಾರದ ಕಾರ್ಯದರ್ಶಿಗಳು,
ಆಕುಕ, ವೈದ್ಯಕೀಯ ಶಿಕ್ಷಣ,
ಹಾಗೂ ಉಪಾಧ್ಯಕ್ಷರು, ರಿಮ್ಸ್ ಆಡಳಿತ
ಮಂಡಳಿ ಸಭೆ, ರಾಯಚೂರು

ಡಾ. ಶರಣ ಪ್ರಕಾಶ್ ರುದ್ರಪ್ಪ ಪಾಟೀಲ,
ವೈದ್ಯಕೀಯ ಶಿಕ್ಷಣ ಸಚಿವರು, ಹಾಗೂ
ಅಧ್ಯಕ್ಷರು, ಆಡಳಿತ ಮಂಡಳಿ ಸಭೆ,
ರಿಮ್ಸ್, ರಾಯಚೂರು